## ಹಿಂದಿನ ಬಾಗಿಲಿಂದ

ತಿಮ್ಮಣ್ಣ ಊರಿಡೀ ಸಾಲಮಾಡಿ ಅವರಿವರ ಕಣ್ಣುತಪ್ಪಿಸಿ ಓಡಾಡುತ್ತಿದ್ದ. ಅದೊಂದು ಮುಂಜಾನೆ ಗುಡ್ಡೇಕೇರಿಯ ಗಣಪಣ್ಣ ಹೇಗಾದ್ರೂ ಮಾಡಿ ಸಾಲವಸೂಲಿ ಮಾಡಿಯೇ ತೀರಬೇಕೆಂದು ಬಂದಿದ್ದ. ಗಣಪಣ್ಣ ಬರುವುದನ್ನು ದೂರದಿಂದಲೇ ನೋಡಿದ ತಿಮ್ಮಣ್ಣ ಮನೆಯ ಕಲಬಿಯೊಳಗೆ ಅಡಗಿ ಕುಳಿತ. ಗಣಪಣ್ಣ ಮನೆಗೆ ಬಂದವನೇ ತಿಮ್ಮಣ್ಣನ ಹೆಂಡತಿಯ ಬಳಿ, 'ಎಲ್ಲಿ ಹೋದ ನಿನ್ನ ಗಂಡ?' ಎಂದು ಕೇಳಿದ. ಅದಕ್ಕಾಕೆ 'ಈಗಷ್ಟೇ ಹೊರಗೆ ಹೊದರಲ್ಲಾ...' ಎಂದಳು. ಗಣಪಣ್ಣ ಸಿಟ್ಟಿನಿಂದ ಕೇಳಿದ– 'ನಾನು ಇಲ್ಲೇ ಇರುವಾಗ ಆತ ಮುಂಬಾಗಿಲಿಂದ ಹೇಗೆ ಹೋಗಲು ಸಾಧ್ಯ?' ಎಂದು. ಉತ್ತರಿಸಲು ತೋಚದೆ ಹೆಂಡತಿ ತಡಬಡಿಸಿದಾಗ ತಿಮ್ಮಣ್ಣ ಕಲುಬಿಯೊಳಗಿನಿಂದಲೇ ಹೇಳಿದ: 'ಹಿಂಬಾಗಿಲಿನಿಂದ ತೋಟದ ದಾರಿಯಲ್ಲಿ ಹೋಗಿರಬಹುದಲ್ವಾ?'

**ತೈರೊಳ್ಳಿ ಮಂಜುನಾಥ ಉಡುಪ**





## ಓಡಲು ಹೇಳಿ

ಶಾಲಿನಿ ಬಹಳ ಅವಸರದಿಂದ ಆಸ್ಪತ್ರೆಗೆ ಓಡಿ ಬಂದು ವೈದ್ಯರಿಗೆ ಹೇಳಿದಳು: 'ಡಾಕ್ಟ್ರೇ ಬೇಗ ಬನ್ನಿ, ನನ್ನ ಗಂಡ ಬಾಟಲಿನಲ್ಲಿದ್ದ ಪೆಟ್ರೋಲನ್ನು ವಿಸ್ಕಿ ಎಂದು ತಿಳಿದು ಕುಡಿದು ಬಿಟ್ಟಿದ್ದಾರೆ'. ವೈದ್ಯರು ಶಾಲಿನಿಯನ್ನು – 'ಮೇಡಂ, ಅವರು ಎಷ್ಟು ಪೆಟ್ರೋಲ್ ಕುಡಿದಿದ್ದಾರೆಂದು ನಿಖರವಾಗಿ ಹೇಳುತ್ತೀರಾ?' ಎಂದು ಕೇಳಿದರು. ಆಗ ಶಾಲಿನಿ, '250 ಎಂ.ಎಲ್.ನಷ್ಟು ಡಾಕ್ಟ್ರೇ' ಎಂದಳು. ಆಗ ಡಾಕ್ಟರ್, 'ಹಾಗಾದರೆ ಅವರಿಗೆ ರಸ್ತೆಯಲ್ಲಿ 5.ಕಿ.ಮೀ. ಓಡಲು ಹೇಳಿ. ಪೆಟ್ರೋಲ್ ಮುಗಿದ ಮೇಲೆ ಸಹಜ ಸ್ಥಿತಿಗೆ ಬರುತ್ತಾರೆ' ಎಂದರು.

**ಧನ್ಯ ಎಚ್.**

ಚಿತ್ರಗಳು: ಗಣೇಶ ಆಚಾರ್ಯ